# ಉಪ ತಹಶೀಲ್ದಾರರು, ನಾಡ ಕಾರ್ಯಾಲಯ, ಹಿರೇಹಡಗಲಿಯಲ್ಲಿ

| ಅರ್ಜಿದಾರರು | ತಕರಾರುದಾರರು |
|---|---|
| ಕಟ್ಟೀಮನಿ ದೇವಿರಮ್ಮ ಗಂಡ ದಿ//ನಾಗಪ್ಪ, ಹಿರೇಹಡಗಲಿ ಗ್ರಾಮ, ಹಡಗಲಿ ತಾ | ಕಟ್ಟೀಮನಿ ದೇವಿರಮ್ಮ ಗಂಡ ದಿ//ನಾಗಪ್ಪ, ಹಿರೇಹಡಗಲಿ ಗ್ರಾಮ, ಹಡಗಲಿ ತಾ |

ವಿವಾದಿತ ಜಮೀನಿನ ವಿವರ:-

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಹಿರೇಹಡಗಲಿ | 509/ಬಿ/1 | 4-72 | ಖುಷ್ಕಿ |
| 2. | ,, | 543/ಬಿ | 5-54 | ,, |
| 3. | ,, | 545/ಸಿ | 2-03 | ,, |

*****

**ಪೀಠಿಕೆ:-**

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಹಿರೇಹಡಗಲಿ ಗ್ರಾಮದ ಸ.ನಂ.509ಬಿ/1 ವಿ:5-72, 543/ಬಿ ವಿ:5-54 ಮತ್ತು 545/ಸಿ ವಿ:2-03 ಎಕ್ರೆ ಜಮೀನಿಗೆ ಸಂಬಂಧಿಸಿದಂತೆ, ಹಿರೇಹಡಗಲಿ ಗ್ರಾಮದ ನಿವಾಸಿಯಾದ ಕಟ್ಟೀಮನಿ ದೇವಿರಮ್ಮ ಗಂಡ ಲೇಟ್ ನಾಗಪ್ಪ ಇವರು ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ದಿ:27-11-2015 ರಂದು ಅರ್ಜಿ ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ-21 ರ ನೋಟೀಸು ದಿನಾಂಕ 12-01-2015 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿ:04-02-2016 ರಂದು ಹಿರೇಹಡಗಲಿ ಗ್ರಾಮದ ನಿವಾಸಿಯಾದ ಕಟ್ಟೀಮನಿ ದೇವಿರಮ್ಮ ಗಂಡ ಲೇಟ್ ನಾಗಪ್ಪ ರವರು ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಕಾರಣ ಎಂ.ಆರ್.ನಂ.54/2015-16 ರ ಕಡತವು ತಕರಾರು ಕಡತವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಹಿರೇಹಡಗಲಿ ರವರು ಈ ಕಾರ್ಯಾಲಯಕ್ಕೆ ವರದಿ ಮಾಡಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿ:28-03-2016 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಯಿತು.

ಪ್ರಕರಣದ ವಿಚಾರಣೆಗೆ ತಕರಾರುದಾರರು ಹಾಜರಾಗಿರುತ್ತಾರೆ. ಪ್ರಕರಣದ ವಿಚಾರಣೆಗೆ ತಕರಾರುದಾರರು ಹಾಜರಾಗಿ ತವು ಮ್ಯುಟೇಷನ್‌ಗಾಗಿ ಅರ್ಜಿ ಸಲ್ಲಿಸಿರುವುದಿಲ್ಲ. ಸದರಿ ಜಮೀನು ನನ್ನ ಗಂಡನ ಹೆಸರಿಗೆ ಹಣಿ ಪಟ್ಟಾ ಇದ್ದು, ಹಾಗೇ ಉಳಿಸಲು ಕೋರಿರುತ್ತಾರೆ. ಹಕ್ಕು ಬದಲಾವಣೆ ಮಾಡಲು ನನಗೆ ಒಪ್ಪಿಗೆ ಇರುವುದಿಲ್ಲ ಎಂದು ಮೌಖಿಕವಾಗಿ ತಿಳಿಸಿರುತ್ತಾರೆ.

ಸದರಿ ಪ್ರಕರಣದಲ್ಲಿ ಸಲ್ಲಿಸಲಾದ ದಾಖಲೆಗಳು ಹಾಗೂ ಹೇಳಿಕೆಗಳನ್ನು ಪರಿಶೀಲಿಸಲಾಯಿತು. ತಕರಾರುದಾರರು ಸಲ್ಲಿಸಿದ ಲಿಖಿತ ತಕರಾರಿನಲ್ಲಿ ತಾನು ಹಕ್ಕು ಬದಲಾವಣೆಗೆ ಅರ್ಜಿ ಸಲ್ಲಿಸಿರುವುದಿಲ್ಲ. ನನ್ನ ಗಂಡನ ಹೆಸರ್ಲೆ ಇರುವ ಯಾವುದೇ ಭೂಮಿಗಳನ್ನು ನನ್ನ ಹೆಸರಿಗೆ ಪಟ್ಟಾ ಹಾಗೂ ಹಕ್ಕು ಬದಲಾವಣೆ ಮಾಡಬಾರದೆಂದು, ನನಗೆ ಗೊತ್ತಿಲ್ಲದ ಹಾಗೆ ನನ್ನ ಎಡಗೈ ಹೆಬ್ಬಟ್ಟಿನ ಸಹಿಯನ್ನು ನಕಲು(ಡುಪ್ಲಿಕೇಟ್) ಮಾಡಿ ಹಕ್ಕು ಬದಲಾವಣೆ ಅರ್ಜಿ ಹಾಕಿರುತ್ತಾರೆ. ಆ ಎಡಗೈ ಹೆಬ್ಬಟ್ಟಿನ ಗುರುತು ನನ್ನದಲ್ಲ. ತಾವುಗಳು ಅದನ್ನ ಪರಿಶೀಲಸಬೇಕೆಂದು, ಆಗೇ ನನ್ನ ಗಂಡನ ಹೆಸರ್ಲೆ ಹಕ್ಕು ಬದಲಾವಣೆ ಉಳಿಸಬೇಕೆಂದು ವಿನಂತಿಸಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿದಾಗ ತಕರಾರುದಾರರು ಹೇಳಿರುವುದು ಸರಿ ಇರುತ್ತದೆ ಎಂದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸ್ಂ/ಕಂ/ಪಹಣಿ/ವಿವಾದ/23/2015-16 ದಿನಾಂಕ:11-04-2016.

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ರ ಪ್ರಕಾರ ಎಂ.ಆರ್.ನಂ.54/2015-16 ರ ಪ್ರಕರಣದಲ್ಲಿ ತಕರಾರುದಾರರ ಅರ್ಜಿಯನ್ನು ಪುರಸ್ಕರಿಸಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ಆದೇಶಿಸಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,
ಹಿರೇಹಡಗಲಿ.

ಪ್ರತಿಯನ್ನು

1. ವಾದಿ ಮತ್ತು ಪ್ರತಿವಾದಿಗಳಿಗೆ
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹೂವಿನಹಡಗಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ ಶುದ್ಧಪ್ರತಿ.